ಮೈಸೂರಿನಲ್ಲಿ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿ

407 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಬೆಳವಣಿಗೆಗೆ ಆಧಾರವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಸಾರಿಗೆ ವ್ಯವಸ್ಥೆ ಅಭಿವೃದ್ಧಿಪಡಿಸಲು ಇಲಾಖೆ ಕೈಗೊಂಡ ಕ್ರಮಗಳಾವುವು?

ಆ) ಹಾಲಿ ಈಗ ಇರುವ ಬಸ್‌ಗಳ ಸಂಖ್ಯೆ ಎಷ್ಟು? ಸಾರಿಗೆ ವ್ಯವಸ್ಥೆ ಸಮರ್ಪಕವಾಗಿರಲು ಇನ್ನೂ ಎಷ್ಟು ಬಸ್‌ಗಳ ಅಗತ್ಯತೆ ಇದೆ?

ಇ) ಈ ದಿಸೆಯಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮ ಏನು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :

ಅ) ಮೈಸೂರು ನಗರದಲ್ಲಿ ಸಾರಿಗೆ ಸೌಕರ್ಯವನ್ನು ಉತ್ತಮಪಡಿಸುವ ಸಲುವಾಗಿ ಕಳೆದ ನಾಲ್ಕು ವರ್ಷಗಳಲ್ಲಿ 33 ಅನುಸೂಚಿಗಳನ್ನು ಹೆಚ್ಚಿಸಲಾಗಿದೆ. ಮೈಸೂರು ನಗರ ಘಟಕ ಒಂದು ಮತ್ತು ಎರಡರಲ್ಲಿ ಆಚರಣೆಗೊಳ್ಳುತ್ತಿರುವ ಸಾಮಾನ್ಯ (ಷಟಲ್) ಸಾರಿಗೆಗಳು ನಗರ ಮಿತಿಯಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಇಳಿಸಿ ಕಾರ್ಯಾಚರಣೆ ಮಾಡುತ್ತಿವೆ.

ಆರ್.ಎಸ್. ನಾಯ್ಡು ನಗರದಲ್ಲಿ ಸಂಸ್ಥೆಯ ಬಸ್ಸು ನಿಲ್ದಾಣ ನಿರ್ಮಿಸಲು ಮೈಸೂರು ನಗಾರಾಭಿವೃದ್ಧಿ ಮಂಡಳಿಗೆ ರೂ. 5,26,320.00ನ್ನು ನೀಡಿ ನಿವೇಶನವನ್ನು ಪಡೆದುಕೊಳ್ಳಲಾಗಿದೆ.

ಸಾತನಹಳ್ಳಿಯಲ್ಲಿ ಮೂರನೆಯ ನಗರ ಘಟಕವನ್ನು ನಿರ್ಮಿಸಲು ಜಮೀನು ಸ್ವಾಧೀನಪಡಿಸಿಕೊಂಡಿದ್ದು ಸದ್ಯದಲ್ಲಿಯೇ ಕಾಮಗಾರಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ವಿಜಯನಗರ 2ನೇ ಹಂತದಲ್ಲಿ ಹಾಗೂ ಜೆ.ಪಿ. ನಗರದಲ್ಲಿ ಘಟಕ ನಿರ್ಮಿಸಲು ಅಗತ್ಯವಿರುವ ಜಾಗವನ್ನು ಮಂಜೂರು ಮಾಡಿಕೊಡುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಲಾಗಿದೆ..

ಆ) 185 ಬಸ್ಸುಗಳನ್ನು ನಗರ ಮತ್ತು ಉಪನಗರ ಮಾರ್ಗಗಳಲ್ಲಿ ಆಚರಣೆಗೊಳಿಸಲಾಗುತ್ತಿದೆ.

1999-2000ನೇ ಕಾರ್ಯ ಯೋಜನೆಯಂತೆ 7 ಹೊಸ ಅನುಸೂಚಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಮೈಸೂರು ನಗರದಲ್ಲಿ ಸಾರಿಗೆ ಅವಶ್ಯಕತೆಯನ್ನು ಪೂರೈಸಲು ಸಂಸ್ಥೆಯು ಆದ್ಯತೆಯ ಮೇರೆಗೆ ಹೊಸ ನಗರ ಸಾರಿಗೆ ಘಟಕಗಳನ್ನು ಪ್ರಾರಂಭ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದೆ. ಹೊಸನಗರ ಸಾರಿಗೆ ಘಟಕಗಳು ಪ್ರಾರಂಭವಾದ ನಂತರ ಮೈಸೂರು ನಗರದ ನಾಗರೀಕರಿಗೆ ಇನ್ನೂ ಹೆಚ್ಚಿನ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಸಾಧ್ಯವಾಗುತ್ತದೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಮಾನ್ಯ ಡಿ.ವಿ.ಜಿ.ಯವರು,

ಇರುವ ಕೆಲಸವ ಮಾಡು
ಕಿರಿದೆನ್ನದೆ ಮನಬಿಟ್ಟು
ದೊರೆತುದು ಅಸಾದವೆಂದುಣ್ಣು
ಗೊಣಗಿಡಿದೆ ಧರಿಸು ಲೋಕದ ಭರವ
ಪರಮಾರ್ಥವನು ಬಿಡದೆ ಹೊರಡು
ಕರೆಬರಲ್ ಅಳದೆ ಮಂಕುತಿಮ್ಮ

ಎಂದು ಹೇಳುತ್ತಾರೆ. ಹಾಗೆ, ನಮಗೆ ಯಾವ ಕೆಲಸ ಸಿಗುತ್ತದೆ, ಅದನ್ನು ಕಟ್ಟುನಿಟ್ಟಾಗಿ ಎಂದು ಹೇಳುತ್ತಾರೆ. ಇವರು, ಆಗುತ್ತದೆ, ನೋಡುತ್ತಿದೆ, ಮಾಡುತ್ತಿದೆ ಎಂಬಂತೆ ಉತ್ತರಿಸುತ್ತಾರೆ. ಇದೇನೆಂದು ನನಗರ್ಥವಾಗುತ್ತಿಲ್ಲ. ಯಾವುದಾದರೂ ಮಾಡಿದ್ದೇವೆಂಬ ಪದ ಇದೆಯೇ? ಮೈಸೂರು ನಗರದ ಸರ್ವಾಂಗೀಣ ಬೆಳವಣಿಗೆ ದೃಷ್ಟಿಯಿಂದ ಮೈಸೂರು ನಗರಕ್ಕೆ ಸಾರಿಗೆ ವ್ಯವಸ್ಥೆ ಜಾಸ್ತಿ ಮಾಡಬೇಕೆಂದು ನಾನು ಕೇಳಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮೈಸೂರು ನಗರದಲ್ಲಿ ಎರಡು ಡಿಪೋಗಳು ಸಿಟಿ ಸರ್ವಿಸಸ್‌ಗೆ ಮತ್ತೆರಡು ಡಿಪೋಗಳು ಮೊಫ್ಯುಸಿಲ್ ಮತ್ತು ಲಾಂಗ್ ಡಿಸ್ಟೆನ್ಸ್‌ಗೆ ಇದ್ದು, ಕೆಲಸ ಮಾಡುತ್ತಿವೆ. ಮಾನ್ಯ ಸದಸ್ಯರು ತಿಳಿಸಿದ ಹಾಗೆ, ಅಲ್ಲಿ ಪೂರ್ಣ ಪ್ರಮಾಣದ ಬೇಡಿಕೆಯಿರುವಷ್ಟು ಸರ್ವೀಸಸ್ ಇಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಟ್ಟು 185 ಬಸ್ಸುಗಳಿದ್ದು, ಅದರ ಜೊತೆಗೆ ಮತ್ತೆ 33 ಬಸ್ಸುಗಳನ್ನು ಸೇರಿಸಿದ್ದೇವೆ. 1999-2000ನೇ ಸಾಲಿನಲ್ಲಿ ಇನ್ನೂ 7 ಷೆಡ್ಯೂಲ್ ಹೆಚ್ಚು ಮಾಡಿದರೂ, ಇನ್ನೂ 40-50 ಬಸ್ಸುಗಳ ಷೆಡ್ಯೂಲಿನ ಅವಶ್ಯಕತೆ ಇದೆ. ಸರ್ವೀಸಸ್ ಅಡಿಕ್ವೇಟ್ ಆಗಿ ಇಲ್ಲ. ಅದಕ್ಕೋಸ್ಕರ ಸಾತಗಳ್ಳಿ, ಜೆ.ಪಿ. ನಗರ ಮತ್ತು ವಿಜಯನಗರದಲ್ಲಿ 3 ಹೊಸ ಡಿಪೋಗಳನ್ನು ಕಟ್ಟುತ್ತೇವೆ. ಡಿಪೋಗಳು ಜಾಸ್ತಿ ಬಂದಾಗ ಸರ್ವೀಸಸ್ ಜಾಸ್ತಿ ಕೊಡಬಹುದು. ಇದರ ಜೊತೆಗೆ, ಶ್ರೀ ಆರ್.ಎಸ್. ನಾಯಿಡು ನಗರದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ನಗರಾಭಿವೃದ್ಧಿ ಮಂಡಲಿಗೆ 5,26,000 ರೂಪಾಯಿಗಳನ್ನು ತುಂಬಿದ್ದೇವೆ. ಮಾನ್ಯ ಸದಸ್ಯರು ತಿಳಿಸಿದ ಹಾಗೆ, ನಾವು ಹೆಚ್ಚು ಸರ್ವೀಸಸ್ ಕೊಡಬೇಕಾಗುತ್ತದೆ. ಮೈಸೂರು ನಗರದಲ್ಲಿ ಎಂಟು ಲಕ್ಷ ಜನಸಂಖ್ಯೆ ಇದೆ. It is a counter magnate city after Bangalore. ಅದಕ್ಕೋಸ್ಕರ ಅಲ್ಲಿ ಆಗಬೇಕಾದ ಜರೂರು ಕೆಲಸಕಾರ್ಯಗಳನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನೀವು ಹೋಗುವುದರೊಳಗೆ ಕೊಡುತ್ತೀರಾ?

ಶ್ರೀ ಬಿ.ಎನ್. ಬಚ್ಚೇಗೌಡ : ಆಗಲಿ, ಕೊಡುತ್ತೇನೆ. ಎಲ್ಲಾ ಕೆಲಸವನ್ನು ನಮ್ಮ ಸರ್ಕಾರದಲ್ಲಿ ಮಾಡಿಸಿಕೊಳ್ಳುತ್ತಾರೆ, ಆದರೆ ಈ ತರಹ ಮಾತನಾಡುತ್ತಾರೆ, ಮಾಡಿಲ್ಲವೆನ್ನುತ್ತಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಕೆಎಸ್‌ಆರ್‌ಟಿಸಿ ಬಸ್ಸುಗಳು ಕೆಂಪು ಹೋರಿಗಳಿದ್ದ ಹಾಗೆ. ಯಾವ ಚಕ್ರ ಎಲ್ಲಿ ಕಳಚಿಕೊಳ್ಳುತ್ತದೆಯೋ ಗೊತ್ತಿಲ್ಲ. ಅಲ್ಲಿ ಅನೇಕ ಬಡಾವಣೆಗಳಿಗೆ ಬಸ್ಸುಗಳು

ಹೋಗುವುದಿಲ್ಲ. ಕೆಎಸ್ಆರ್‌ಟಿಸಿ ಸ್ಥಿತಿ ಚಿಂತಾಜನಕವಾಗಿದೆ. ಮಾನ್ಯ ಬಚ್ಚೇಗೌಡರು ಅದನ್ನು ಸರಿಪಡಿಸುತ್ತಾರೆಂದೇ ನಾವು ಪ್ರಶ್ನೆ ಕೇಳುತ್ತಿರುವುದು.

ಶ್ರೀ ಬಿ.ಎನ್. ಬಚ್ಚೇಗೌಡ : ನಾವು ಮಾಡುವ ಕೆಲಸಗಳ ಬಗ್ಗೆ ಹೇಳಿದ್ದೇನೆ. ಹಿಂದೆ ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ನೀರಿನ ವ್ಯವಸ್ಥೆ ಎಲ್ಲವನ್ನೂ ಮಾಡಿಸಿಕೊಟ್ಟಿದ್ದೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅದರ ಬಗ್ಗೆ ಎರಡು ಮಾತಿಲ್ಲ. ಗುಣಕ್ಕೆ ಮತ್ಸರವಿಲ್ಲ.

SRI B.N. BACHE GOWDA : There is inadequate service in Mysore. ಅದನ್ನು ಮಾಡಿಕೊಡುತ್ತೇವೆ.

ಶ್ರೀ ಎ. ರಾಮದಾಸ್ : ಕಳೆದ ನಾಲ್ಕು ವರ್ಷಗಳಿಂದ ವಿಭಾಗೀಯ ಸಾರಿಗೆ ಮೀಟಿಂಗ್ ನಲ್ಲಿ ಶಾಸಕರನ್ನು ರೆಗ್ಯುಲರ್ ಆಗಿ ಕರೆಯಲಾಗುತ್ತಿತ್ತು. ನಾನು, ಇವರು 14 ಪತ್ರಗಳನ್ನು ಕಳಿದ ಬಾರಿ ಜಿಲ್ಲಾಧಿಕಾರಿಗಳು ಬಂದಾಗಲೂ ಕೊಟ್ಟಿದ್ದೇವೆ. ಒಂದೇ ಒಂದನ್ನು ಎಗ್ಸಿಕ್ಯೂಟ್ ಮಾಡಲಿಕ್ಕಾಗುತ್ತಿಲ್ಲ. ಮೈಸೂರು ನಗರದ ಸಾರಿಗೆ ವ್ಯವಸ್ಥೆ ಅಷ್ಟೊಂದು ಅಧ್ವಾನವಾಗಿದೆ. ಅದಕ್ಕಾಗಿ ಒಂದು ಕಾಯಕಲ್ಪ ಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಶಾಸಕರನ್ನು ಅವರ ಸಭೆಗಳಿಗೆ ಕರೆಯುವ ಹಾಗೆ, ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಗುಳೇದಗುಡ್ಡ ನಗರಕ್ಕೆ ಬಸ್ ಡಿಪೋ ಮಂಜೂರಾತಿ

408 - ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದಗುಡ್ಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ನಗರಕ್ಕೆ ಬಸ್ ಡಿಪೋ ಮಂಜೂರಾತಿ ಬಗ್ಗೆ ಆ ಭಾಗದ ಜನರು ಬಹುದಿನಗಳಿಂದ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವಾಯುವ್ಯ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಕಳೆದ ಫೆಬ್ರುವರಿ ತಿಂಗಳಲ್ಲಿ ಬಸ್ ಡಿಪೋಗಾಗಿ ಸ್ಥಳ ಪರಿಶೀಲನೆ ಮಾಡಿ ಹೋದ ನಂತರ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ಹಾಗೂ ಯಾವಾಗ ಬಸ್ ಡಿಪೋ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಘಟಕ ನಿರ್ಮಾಣಕ್ಕಾಗಿ ಗುಳೇದಗುಡ್ಡ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ. 47ರಲ್ಲಿ 2 ಎಕರೆ 39 ಗುಂಟೆ ನಿವೇಶನವನ್ನು ಬಸ್ ಡಿಪೋ ನಿರ್ಮಾಣ ಮಾಡಲು ಸರ್ಕಾರವು ಆದೇಶ ಸಂಖ್ಯೆ. ನಅಇ 148 ಬಿಎಂಡಿ 99 ದಿನಾಂಕ 2.7.99ರಲ್ಲಿ ಮಂಜೂರಾತಿ ನೀಡಿದೆ.

ಸದರಿ ಬಸ್ ಡಿಪೋ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗುವುದು.